(b) when the Dentist would be appointed ?

SRI M. MALLAPPA (Minister for Health and Family Welfare).—

(a) Yes.

(b) As early as possible

ಶ್ರೀ ಡಿ. ನಾರಾಯಣದಾಸ್.—ಸ್ವಾಮಿ, ನಮ್ಮ ಹರಪನಹಳ್ಳಿ ಕಂಬೈನ್ಡ್ ಡಿಸ್ಪೆನ್ಸರಿಯಲ್ಲಿ ಕಳೆದ ೪-೫ ವರ್ಷಗಳಿಂದ ದಂತವೈದ್ಯರಿಲ್ಲದಿರುವುದಕ್ಕೆ ಕಾರಣವೇನು ?

†ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈ ಡಿಸ್ಪೆನ್ಸರಿಯಲ್ಲಿದ್ದ ದಂತ ವೈದ್ಯರು ೧-೨-೧೯೭೫ ರಲ್ಲಿ ರಾಜೀನಾಮೆ ಕೊಟ್ಟು ಬೇರೆ ಕಡೆಗೆ ಹೋದರು. ಈ ಜಾಗವನ್ನು ತುಂಬುವುದಕ್ಕೆ ಪಿ. ಎಸ್. ಸಿ. ಯವರಿಗೆ ಹೇಳಿದ್ದೇವೆ. ಆದಷ್ಟು ಬೇಗ ಈ ಸ್ಥಾನವನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ. ನಾರಾಯಣದಾಸ್.—ಸ್ವಾಮಿ, ಆದಷ್ಟು ಜಾಗ್ರತೆ ಎಂದರೆ ಎಷ್ಟು ದಿವಸದಲ್ಲಿ ತುಂಬುತ್ತೀರಿ ?

ಶ್ರೀ ಎಂ. ಮಲ್ಲಪ್ಪ.—ಪಿ. ಎಸ್. ಸಿ. ರಿಪೋರ್ಟ್ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

## Kannada Slogan "Navibbaru, Namage Ibbaru Makkalu" on Family Planning.

1141 SRI MICHAEL B. FERNANDES (Bharatinagar).—Will the Minister for Health and Family Welfare be pleased to state

(a) what is the purpose of the Family Planning Slogan, in Kannada, reading as "Navibbaru, Namage Ibbaru Makkalu", "Keerthi gobba Maga, Arthigobbalu Magalu" being splashed on many public walls in rural places ;

(b) will the Government give guarantee to couples responding to this slogan, that the two children they may have will be automatically one male and the other female ;

(c) in the absence of this guarantee; will not such couples go on producing more babies of the same sex, until, at long last, they have a baby of the other sex, thus ensuring both "Keerthi" and "Arathi" ;

(d) will the Government therefore withdraw this slogan immedi ately and replace it by more appropriately worded one ?

SRI M. MALLAPPA.—(Minister for Health and Family Welfare)

(a) The purpose of the slogans is to spread the message of small family norm in the rural areas.

(b) The purpose is not to give any guarantee but to spread the message of small family.

(c) That is not the intention of the slogans. The intention is to motivate the eligible couples to have only two children.

(d) The slogan ''Keerthigobba maga, Arathigobbalu Magalu' is not being used now. Such slogans which are seen on the walls in some rural places, were painted long back.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಸ್ವಾಮಿ, ಒಂದು ಕುಟುಂಬದಲ್ಲಿ ಸುಮಾರು ೯ ಹೆಣ್ಣು ಮಕ್ಕಳಾಗಿವೆ, ೧೦ನೆಯದು ತಯಾರಾಗುತ್ತಿದೆ ಇನ್ನು ಸಾಕು ನಿಲ್ಲಿಸಿ ಎಂದು ಯಾರಾದರೂ ಹೇಳಿದರೆ, ಅವರು ''ಕೀರ್ತಿಗೊಬ್ಬ ಮಗ, ಆರತಿಗೊಬ್ಬಳು ಮಗಳು'' ಎನ್ನುವ ಸ್ಲೋಗನ್ ತೋರಿಸಿ ಈಗ ನಮಗೆ ಕೀರ್ತಿಗೊಬ್ಬ ಮಗ ಬೇಕಾಗಿದೆ ಎಂದು ಹೇಳುತ್ತಿದ್ದಾರೆ ಅವರ ತಲೆಯಲ್ಲಿ ನಮಗೆ ಒಂದು ಗಂಡು ಮಗು ಬೇಕೆಂದು ಹುಚ್ಚು ಹಿಡಿದಿದೆ. ಆದುದರಿಂದ ಈ ಸ್ಲೋಗನ್ ಬದಲಾವಣೆ ಮಾಡಿ, ಈಗ ಆ ಕುಟುಂಬ ವರ್ಗದವರ ಖರ್ಚಿಗೆ ಹಣ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

†ಶ್ರೀ ಎಂ. ಮಲ್ಲಪ್ಪ.—ತಾವು ಹೇಳುತ್ತಿರುವ ಸ್ಲೋಗನ್ ಬಹಳ ಹಳೆಯದು ಈಗ ಅದನ್ನು ಬದಲಾವಣೆ ಮಾಡಿದ್ದೇವೆ. ಏನು ಮಾಡಿದ್ದೇವೆ ಅಂದರೆ ', ಹೆಣ್ಣಿರಲ್ಲಿ, ಗಂಡಿರಲಿ, ಮಕ್ಕಳು ಎರಡೇ ಇರಲಿ ಎಂದು. ಇದನ್ನು ತಾವು ಪೊಲಿಟಿಕಲ್ ಆಗಿ ಭಾವಿಸಬಾರವೆ. ಇದನ್ನು ರಾಷ್ಟ್ರೀಯ ಸಮಸ್ಯೆಯಾಗಿ ಭಾವಿಸಬೇಕು. If we motivate the people to understand the implications of the problem, then I think we will be able to solve it.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನೀವು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಈ ಸ್ಲೋಗನನ್ನು ಇನ್ನೂ ತಾವು ಕಂಡೇ ಕಾಣುತ್ತೀರಿ. ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ ನಾನು ಮಾನ್ಯ ಡೆಪ್ಯುಟಿ ಸ್ಪೀಕರ್‌ರವರೂ ದಾಂಡೇಲಿಯಲ್ಲಿ ನಡೆದ ಒಂದು ಕಾನ್‌ಫರನ್ಸ್‌ಗೆ ಹೋಗಿದ್ದಾಗ ಅಲ್ಲಿ ಈ ವಿಷಯವನ್ನು ಇಟ್ಟಿದ್ದೆ. ಆದ್ದರಿಂದ ಇದನ್ನು ನಾನು ರಾಜಕೀಯ ದೃಷ್ಟಿಯಿಂದ ನೋಡುತ್ತಿಲ್ಲ. ಇನ್ನು ಎರಡನೆಯದಾಗಿ ಹೇಳುವುದಾದರೆ, ಈ ಸ್ಲೋಗನ್‌ನ್ನು ನಾವು ಯಾವ ಕಡೆ ಹೋದರೂ ಅಲ್ಲೆಲ್ಲಾ ನೋಡುತ್ತಲೇ ಇರುತ್ತೇವೆ. ಉದಾಹರಣೆಗೆ, ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಈ ಸ್ಲೋಗನ್ ಇನ್ನೂ ಇದ್ದೇ ಇದೆ. ಅದರಲ್ಲಿ ''ನಾವಿಬ್ಬರು ನಮಗೆ ಇಬ್ಬರೇ ಮಕ್ಕಳು ಎಂದು ಇದ್ದರೆ, ಕೆಲವರು ಅದರಲ್ಲಿ ''ಇ'' ತೆಗೆದು, ''ನಾವಿಬ್ಬರು ನಮಗೆ ಬರೇ ಮಕ್ಕಳು'' ಎಂದು ಮಾಡಿರುತ್ತಾರೆ. ಆದುದರಿಂದ ಈ ಸ್ಲೋಗನ್ ತಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

(ಸಭೆಯಲ್ಲಿ ನಗು)

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ''ಇ'' ಒಂದನ್ನೇ ತೆಗೆದರೆ ಆಗುವುದಿಲ್ಲ, ''ಬ'' ಒತ್ತಕ್ಷರವನ್ನೂ ತೆಗೆಯಬೇಕಾಗುತ್ತದೆ.

ಶ್ರೀ ಎಂ. ಮಲ್ಲಪ್ಪ.—ಈಗಾಗಲೇ ನಾನು ಹೇಳಿದ್ದೇನೆ ಇದು ೧೯೭೪ರ ಹಿಂದೆ ನಮೂದಿಸಿದ್ದುದು ಎಂದು, ಇತ್ತೀಚೆಗೆ ನಾವು ಈ ಸ್ಲೋಗನ್‌ನ್ನು ಅನುಸರಿಸುತ್ತಿಲ್ಲ. ಈ ಸ್ಲೋಗನ್ ನೋಡಿಬಿಟ್ಟು ನಮಗೆ ಗಂಡು ಮಕ್ಕಳು ಆಗಲಿ ಎಂದು ಪ್ರಯತ್ನ ಮಾಡುತ್ತಾರೆಂದಲ್ಲ. ಈಗ ಯಾರೂ ಗಂಡಾಗಲೀ, ಹೆಣ್ಣಾಗಲೀ ಎರಡು ಮಕ್ಕಳು ಬೇಕು ಎಂದು ಹೇಳುತ್ತಾರೆಯೇ ಹೊರತು ಗಂಡು ಮಗು ಆಗಲೇ ಬೇಕು ಎಂದು ಹೇಳುವವರು ಇಲ್ಲ ಎಂದು ಕಾಣುತ್ತದೆ. Medical Sence has not advanced so much to ensure that the child will be male or female. ಇನ್ನೂ ಡೆವೆಲಪ್ ಆಗಿಲ್ಲ, ಸರ್ಕಾರದ ಉದ್ದೇಶ ಏನೆಂದರೆ, ಎರಡು ಅಥವಾ ಮೂರು ಮಕ್ಕಳು ಇರಬೇಕು ಎನ್ನುವುದು. ಅದನ್ನು ನೀವೂ ಒಪ್ಪುತ್ತೀರಿ.

ಶ್ರಿ ಮೈಕೇಲ್ ಬಿ. ಫರ್ನಾಂಡಿಸ್.—ಹಾಗಿದ್ದ ಮೇಲೆ ಅಧಿಕಾರಿಗಳು ಈ ಸ್ಲೋಗನ್ ಮಾಡ ಬಹುದಿತ್ತೇ? ಮುಖ್ಯವಾದ ಪ್ರಶ್ನೆ, ಕೀರ್ತಿಗೊಬ್ಬ ಗಂಡು ಮಗ ಇಲ್ಲದಿದ್ದರೆ, ಹೆಣ್ಣು ಮಕ್ಕಳಿದ್ದವರಿಗೆ ಮನಸ್ಸು ಬೇಜಾರು ಆಗುತ್ತದೆ. ಗಂಡು ಮಕ್ಕಳಿಲ್ಲದಿದ್ದರೆ ಕೀರ್ತಿ ಬರುವುದಿಲ್ಲ ಎನ್ನುವ ಅಭಿಪ್ರಾಯವೇ?

ಶ್ರೀ ಎಂ. ಮಲ್ಲಪ್ಪ.—ಈ ವಿಷಯ ಮದುವೆಯಾದವರಿಗೆ ಇನ್ನೂ ಹೆಚ್ಚು ಅರ್ಥವಾಗುತ್ತದೆ. ಮದುವೆಯಾಗಿ, ಇದರ ಅನುಭವವನ್ನು ಕಂಡುಕೊಂಡರೆ ನಾವು ಹೇಳುವುದನ್ನು ತಾವೂ ಸಮರ್ಥನೆ ಮಾಡುತ್ತೀರಿ ಎಂದು ನನ್ನ ಅಭಿಪ್ರಾಯ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಈ ಸ್ಲೋಗನ್ ಇರುವುದರಿಂದ ನಾವು ಮದುವೆಯಾಗುವುದಕ್ಕೆ ತೊಂದರೆಯಾಗಿದೆ. ಸ್ಲೋಗನ್ ತೆಗೆಯುತ್ತೇವೆಂದು ತಾವು ಗ್ಯಾರಂಟಿ ಕೊಟ್ಟರೆ ನಾವು ಮದುವೆಯಾಗುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ತಾವು ಮದುವೆ ಮಾಡಿಕೊಂಡು ಪ್ರಯೋಗ ಮಾಡಿ.

SRI G. B. SHANKAR RAO.—In reply to (c), you have stated that the intention is to motivate the eligible couples to have only two children. I don't know what the Hon. Minister means "eligible". Are there ineligible couples also in this country?

SRI M. MALLAPPA.—It means married couple. Eligibility means married couple, *i. e.*, legally-wedded couple.

10-00 A.M.

ಶ್ರೀ ಕೆ. ಎಂ. ತಮ್ಮಯ್ಯ.—ಮಗುವಿನ ತಾಯಿಯ ಹೊಟ್ಟೆಯೊಳಗೆ ಗಂಡು ಮಗು ಇದೆಯೋ ಅಥವಾ ಹೆಣ್ಣು ಮಗು ಇದೆಯೋ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಹೊಸದಾಗಿ ಒಂದು ಎಕ್ವಿಪ್‌ಮೆಂಟ್ ಬಂದಿದೆ ಎಂದು ಕೇಳಿದ್ದೇನೆ, ಅದನ್ನಾದರೂ ತಾವು ತಂದು ಪ್ರಯೋಗ ಮಾಡಿ ನೋಡಿದರೆ ಜನಸಂಖ್ಯೆ ಕಡಿಮೆಯಾಗುವುಗಕ್ಕೆ ಒಂದು ಅವಕಾಶವಾಗುವುದಿಲ್ಲವೇ?

ಶ್ರೀ ಎಂ. ಮಲ್ಲಪ್ಪ.—ಇದರ ಜೊತೆಗೆ ತಮ್ಮ ಅನುಭವವನ್ನು ಹೇಳಿದ್ದರೆ ನಾನು ತಮಗೆ ಸಮರ್ಪಕವಾಗಿ ಉತ್ತರ ಕೊಡುತ್ತಿದ್ದೆ.

## Old Age Pension

836. SRI SUDINDAR RAO KASBE (Kalmala).— Will the Minister for Finance be pleased to state:—

(*a*) whether it has come to the notice of Government that old age pension amount to the pensioners invillages is not being disbursed in full and that village Patels and other persons responsible for disbursement take away some amount and pay the rest.

(*b*) if so, the action proposed to be taken by Government to check these malpractices?

SRI S. M. YAHYA (Minister for Finance).—

(*a*) Yes. Only one case has come to the notice of Government.

(*b*) Disciplinary proceedings has been instituted against the persons concerned.

ಶ್ರೀ ಎಸ್. ಆರ್. ಕಸಬೆ.—ವಿಶ್ರಾಂತಿ ವೇತನದ ಹಂಚಿಕೆಯಲ್ಲಿ ಸರಿಯಾಗಿ ಹಂಚಿಕೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂಥ ಅನೇಕ ಕೇಸುಗಳು ರಾಜ್ಯದಲ್ಲಿ ಆಗಿರುವುದರಿಂದ, ಇರ್ರೆಗ್ಯುಲಾರಿಟೀಸ್ ಬಗ್ಗೆ ಸರ್ಕಾರದವರು ಸಂಬಂಧಪಟ್ಟ ವ್ಯಕ್ತಿಯ ಮೇಲೆ ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ? ಅಲ್ಲದೆ, ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ, ತಹಸೀಲ್ದಾರ್ ಅವರಿಗೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ಇಂಥ ಕೇಸುಗಳನ್ನು ಸರಿಯಾಗಿ ಅಬ್ಸರ್ವ್ ಮಾಡುವುದಕ್ಕೆ ಆದೇಶ ಕೊಡುತ್ತೀರಾ?